# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ - 146
ಉತ್ತರಿಸಬೇಕಾದ ದಿನಾಂಕ - 10.07.2018
ಸದಸ್ಯರ ಹೆಸರು - ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ)

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮುಂಡರಗಿ ಪಟ್ಟಣದಲ್ಲಿ ನಗರಸಭೆ ವತಿಯಿಂದ (RGRHCL) ಯೋಜನೆ ಅಡಿಯಲ್ಲಿ ನಿವೇಶನ/ಮನೆ ಹಂಚಿಕೆ ಮಾಡಲು ಜಾಗ ಖರೀದಿಸಲಾಗಿದೆಯೇ? | ಹೌದು<br>ಗದಗ ಜಿಲ್ಲೆ ಮುಂಡರಗಿ ಪುರಸಭೆ ವ್ಯಾಪ್ತಿಯ ನಿವೇಶನ ರಹಿತ ವಸತಿ ರಹಿತರಿಗೆ ವಸತಿ ಒದಗಿಸಲು ಪುರಸಭೆ ವ್ಯಾಪ್ತಿಯಲ್ಲಿ ಬರುವ ಶಿರೋಳ ಗ್ರಾಮದ ಸರ್ವೆ ನಂ.24/2, 24/3, 24/4, 251, 25/2 ಮತ್ತು 25/3 ರಲ್ಲಿ ಒಟ್ಟು 25.21 ಎಕರೆ ಜಮೀನನ್ನು ವಾಜಪೇಯಿ ನಗರ ನಿವೇಶನ ಯೋಜನೆಯಡಿ ಖರೀದಿಸಲು ರೂ.2,55,25,000/-ಗಳನ್ನು ಹಾಗೂ ಈ ಜಮೀನಿನಲ್ಲಿ ನಿವೇಶನಗಳ ರಚನೆ ಹಾಗೂ ಅಭಿವೃದ್ಧಿಗಾಗಿ ಪ್ರತಿ ನಿವೇಶನಕ್ಕೆ ರೂ.2,000/-ಗಳಂತೆ ರೂ.20,42,000/-ಗಳನ್ನು ಒಟ್ಟು 2,75,67,000 ಗಳನ್ನು ಗದಗ ಜಿಲ್ಲಾಧಿಕಾರಿಯವರಿಗೆ ಬಿಡುಗಡೆ ಮಾಡಲಾಗಿದೆ. |
| ಆ) | ಹಾಗಿದ್ದಲ್ಲಿ, ಎಷ್ಟು ಎಕರೆ ಜಮೀನನ್ನು ಯಾವಾಗ ಖರೀದಿಸಲಾಗಿದೆ; ಇದಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು? | |
| ಇ) | ಮುಂಡರಗಿ ಪಟ್ಟಣದಲ್ಲಿ ನಿವೇಶನ ಹಂಚಿಕೆ ಮಾಡಲು ಬಡ ಸಾರ್ವಜನಿಕರು ಪದೇ ಪದೇ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ನಿವೇಶನ ಹಂಚಿಕೆ ಪ್ರಕ್ರಿಯೆ ಪ್ರಾರಂಭ ಮಾಡುವಲ್ಲಿ ಇರುವ ತೊಂದರೆ ಏನು;(ವಿವರ ನೀಡುವುದು)? | ಬಂದಿದೆ, ಪ್ರಸ್ತಾಪಿತ 25.21 ಎಕರೆ ಜಮೀನನ್ನು ದಿನಾಂಕ:23.09.2017 ರಂದು ಖರೀದಿ ಮಾಡಲಾಗಿದ್ದು ತದನಂತರ ನಿವೇಶನಗಳ ಹಂಚಿಕೆಗೆ ಈ ಕೆಳಗಿನ ಹಂತಗಳನ್ನು ಅನುಸರಿಸಬೇಕಾಗುತ್ತದೆ.<br>1. ಜಮೀನು ಖರೀದಿಯ ನಂತರ ಸದರಿ ಜಮೀನಿನಲ್ಲಿ ಸಮತಟ್ಟು ಮಾಡಿ ನಿವೇಶನಗಳ ರಚನೆ ಮಾಡುವುದು.<br>2. ಬಡಾವಣೆ ನಕ್ಷೆಯನ್ನು ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳುವುದು.<br>3. ಅರ್ಹ ಫಲಾನುಭವಿಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯ ನಗರ ಆಶ್ರಯ ಸಮಿತಿಯಲ್ಲಿ ಮಾಡುವುದು.<br>4. ಆಯ್ಕೆ ಮಾಡಿದ ಫಲಾನುಭವಿಗಳಿಗೆ ಹಕ್ಕುಪತ್ರಗಳ ಹಂಚಿಕೆಗಾಗಿ ಆನ್‌ಲೈನ್ ಮೂಲಕ ಹಂಚಿಕೆಗಾಗಿ ಸಲ್ಲಿಸುವುದು.<br>ಪ್ರಸ್ತುತ ಪ್ರಕರಣವು ಬಡಾವಣೆ ನಕ್ಷೆಯ ಅನುಮೋದನೆಗಾಗಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಗದಗ ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದು ಪರಿಶೀಲನೆಯಲ್ಲಿರುತ್ತದೆ. ನಕ್ಷೆ ಅನುಮೋದನೆಯ ನಂತರ ಮಾನ್ಯ ಶಾಸಕರ ಅಧ್ಯಕ್ಷತೆಯ ಆಶ್ರಯ ಸಮಿತಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ನಿವೇಶನ ಹಕ್ಕುಪತ್ರ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು. ನಿವೇಶನ ಹಂಚಿಕೆ ಮಾಡಲು ಯಾವುದೆ ತೊಂದರೆ ಇರುವುದಿಲ್ಲ. |

ಸಂಖ್ಯೆ: ವಇ 131 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.